# ಆಹಾ ಸುದ್ದಿ!

★ ಸಸಿತೋಟ



ಸ್ಪೇನಿನ ಇಬಿ ಪಟ್ಟಣದಲ್ಲಿ ವರ್ಷಕ್ಕೊಮ್ಮೆ ನಡೆಯುವ 'ಮುಗ್ಧರ ದಿನಾಚರಣೆ'ಯಂದು ಹಿಟ್ಟು, ಮೊಟ್ಟೆ, ಪಟಾಕಿಗಳಿಂದ ಯುದ್ಧ ಮಾಡುತ್ತಾರಂತೆ. 200 ವರ್ಷಗಳ ಇತಿಹಾಸವಿದೆಯಂತೆ ಈ ಸಾಂಪ್ರದಾಯಿಕ ಆಚರಣೆಗೆ. ಮುಗ್ಧರಾಗಿದ್ದರಿಂದ ಅಲ್ಲಿ ಹೊಟ್ಟೆಗೆ ತಿನ್ನುವ ಹಿಟ್ಟು-ಮೊಟ್ಟೆಗಳೇ ಉಳಿದುಕೊಂಡಿವೆ. ಇನ್ನು ಕೆಲವು ಕಡೆ ಮುಗ್ಧತೆ ಮಾಯವಾಗಿದ್ದರಿಂದ ಹೊಟ್ಟೆ ಸೀಳುವ ಚೂರಿ-ಬಂದೂಕು- ಬಾಂಬ್ ಬಂದಿವೆ.

ಫ್ಲಾರಿಡಾದ ಆಭರಣ ಮಳಿಗೆಯೊಂದು ಹೊಸ ವರ್ಷದ ಅಂಗವಾಗಿ ಕೊಡುಗೆ ಪ್ರಕಟಿಸಿತ್ತು. ಆಭರಣ ಕೊಂಡವರಿಗೆ ಉಚಿತ ಗನ್. ಹೆಂಡತಿ ಆಭರಣ ಧರಿಸಿ ಹೊರಗೆ ಹೊರಟರೆ, ಗಂಡ ಗನ್ ಹೆಗಲ ಮೇಲೆ ಏರಿಸಿ ಆಕೆಯ ಹಿಂದೆ ಹೊರಡಬಹುದು.

ಚೀನಾದ ಹುಬೇರಿ ಪ್ರಾಂತ್ಯದಲ್ಲಿ ಚಹದ ತೋಟವನ್ನು ವೀಕ್ಷಿಸಲು ಎತ್ತರದಲ್ಲಿ ತೂಗು ಸೇತುವೆ ನಿರ್ಮಿಸಿದ್ದಾರಂತೆ. ಪ್ರವಾಸಿಗರು ತೋಟದ ಅಂದ ಸವಿಯುತ್ತಾರೋ ಅಥವಾ ಅಪಾಯಕಾರಿ ಸೇತುವೆಯನ್ನು ಸಂಭಾಳಿಸುವತ್ತ ಗಮನ ಕೊಡುತ್ತಾರೋ! 'ಹೈ ಟೀ' ಎಂದರೆ ಈ ರೀತಿ ಅರ್ಥ ಮಾಡಿಸಬಾರದಿತ್ತು.





ಮಲೇಷ್ಯಾದಲ್ಲಿ ಇ- ಸಿಗರೇಟ್ ಎಷ್ಟು ಜನಪ್ರಿಯವೆಂದರೆ ಗಲ್ಲಿಗಲ್ಲಿಗಳಲ್ಲಿ ಹೊಗೆ ಎಬ್ಬಿಸುತ್ತಿದ್ದವರು ನಗರ ಮಧ್ಯದ ವೃತ್ತದಲ್ಲೇ ನಿಂತುಕೊಂಡು ಹೊಗೆಬತ್ತಿ ಎಳೆಯುತ್ತಿದ್ದಾರಂತೆ. ಅಲ್ಲೀಗ ಹೊಗೆಬತ್ತಿ ಮೇಳ ನಡೆಯುತ್ತಿದ್ದು, ಸರ್ಕಾರ ಏನೂ ಮಾಡಲಾಗದೇ ಕೈಕೈ ಹಿಸುಕಿಕೊಳ್ಳುತ್ತಿದೆಯಂತೆ. ಸಂಪೂರ್ಣ ನಿಷೇಧಿಸಲು ಸಾಧ್ಯವಿಲ್ಲ ಎಂದಾದರೆ ಸಮ- ಬೆಸ ಉಪಾಯ ಹೂಡಬಹುದು.

ಅಮೆರಿಕಾದ ಶಿಕ್ಷಕಿ ಕಾರ್ಡೆಲ್ ಹೊಟ್ಟೆಯೊಳಗೇ ಮದ್ಯ ತಯಾರಾಗುತ್ತಂತೆ. ಸಣ್ಣ ಕರುಳಿನಲ್ಲಿ ಯೀಸ್ಟ್ ಪ್ರಮಾಣ ಜಾಸ್ತಿ ಇದ್ದು ತಿಂದ ಆಹಾರವನ್ನು ಮದ್ಯವನ್ನಾಗಿಸಿ ರಕ್ತಕ್ಕೆ ಸೇರಿಸುತ್ತದಂತೆ. ಕುಡಿದು ಕಾರು ಚಲಾಯಿಸುತ್ತಿದ್ದಾಳೆ ಎಂಬ ಆರೋಪದ ಮೇಲೆ ಬಂಧಿಸಿದಾಗ ಈ ಪ್ರಕರಣ ಗೊತ್ತಾಯ್ತಂತೆ. ಆರೋಪದಿಂದ ಮುಕ್ತಳಾದ ಈಕೆ 'ಕುಡಿತದ ಆರೋಪದಿಂದ ತಪ್ಪಿಸಿಕೊಳ್ಳುವುದು ಹೇಗೆ?' ಎಂಬ ಪುಸ್ತಕ ಬರೆಯಬಹುದು.

ಟೋಕಿಯೋದ ಈ ಕಡಲ ಸಿಂಹಿಣಿ ಪಿಕೊ ಅಕ್ಕಿ ಕೇಕ್ ಮಾಡಲು ತವುಡು ಕುಟ್ಟುತ್ತಿದೆ. 15 ದಿನಗಳ ಕಾಲ ದಿನಕ್ಕೆ ಎರಡು ಬಾರಿ ಕುಟ್ಟುವುದೇ ಕೆಲಸವಂತೆ. ಪಿಕೋಗೆ ಬುದ್ಧಿ ಬಲಿತಿದ್ದರೆ ಲಿಂಗ ಸಮಾನತೆ ಬಗ್ಗೆ ಭಾಷಣ ಮಾಡಿ, ಅಡುಗೆಮನೆಗೆ ಧಿಕ್ಕಾರ ಕೂಗಿ, ಸೀದಾ ಕೇಕ್ ಷಾಪ್‌ಗೆ ತೆರಳುತ್ತಿತ್ತು ಚೀಲ ಮತ್ತು ಹಣ ಹಿಡಿದುಕೊಂಡು.

